# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಸ.ಅ/ವಾರ್ಡ್ ಸಭೆ/186/ಸಭೆ-03/2021-22 ದಿನಾಂಕ:21.10.2021.

## ಜರಗನಹಳ್ಳಿ ವಾರ್ಡ್ ನಂ 186ರಲ್ಲಿ ನಡೆದ ಸಭೆಯ ನಡಾವಳಿಗಳು

ದಿನಾಂಕ 21.10.2021 ರಂದು ಅರಕೆರೆ ಉಪವಿಭಾಗದ ವಾರ್ಡ್ ನಂ 186 ರ ಜರಗನಹಳ್ಳಿ ವ್ಯಾಪ್ತಿಯ ಜರಗನಹಳ್ಳಿ ವಾರ್ಡ್ ಕಛೇರಿಯಲ್ಲಿ ಶ್ರೀ ಡಾ॥ ರವಿ, ನೋಡಲ್ ಅಧಿಕಾರಿಗಳು, ಜರಗನಹಳ್ಳಿ ವಾರ್ಡ್ ನಂ 186 ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡಾವಳಿ.

ಹಾಜರಿದ್ದವರು.

| ಕ್ರಮ ಸಂ | ಸದಸ್ಯರ ಹೆಸರು | ಪದನಾಮ / ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ ಡಾ॥ ರವಿ, | ನೋಡಲ್ ಅಧಿಕಾರಿಗಳು ವಾರ್ಡ್ ನಂ 186. | ಹಾಜರಿದ್ದರು. |
| 2 | ಶ್ರೀ ನರಸಿಂಹಮೂರ್ತಿನಾಯಕ್ | ಕಾರ್ಯದರ್ಶಿಗಳು | ಹಾಜರಿದ್ದರು. |
| 3 | ಶ್ರೀ ಕೃಷ್ಣ. ಎನ್ | ಕಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿದ್ದರು. |
| 4 | ಶ್ರೀ ನರೇಶ್. ಬಿ.ಎಸ್ | ಹಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿದ್ದರು. |
| 5 | ಶ್ರೀ ಕಿರಣ್ ಕುಮಾರ್ | ಸ್ಥಳೀಯ ನಿವಾಸಿಗಳು. | ಹಾಜರಿದ್ದರು |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು/ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

| | |
|---|---|
| ವಿಷಯ-01 | ಹಿಂದಿನ ಸಭೆಯ ನಡವಳಿಯನ್ನು ಓದಿ ರೆಕಾರ್ಡ್ ಮಾಡುವುದು. |
| ತೀರ್ಮಾನ | ಹಿಂದಿನ ಸಭೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ವಿಷಯ ಮತ್ತು ತೀರ್ಮಾನವನ್ನು ಓದಿ ರೆಕಾರ್ಡ್ ಮಾಡಲಾಯಿತು. |

1. <u>ಆರೋಗ್ಯ/ಘನ ತ್ಯಾಜ್ಯ ಇಲಾಖೆ :-</u> ವಾರ್ಡ್ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ಕಸವಿಲೇವಾರಿಯ ಬಗ್ಗೆ ಮಾಹಿತಿಯನ್ನು ಕಿರಿಯ ಆರೋಗ್ಯ ನೀಡಿದರು ಹಾಗೂ ಹಾಲಿ ವಾರ್ಡ್ ವ್ಯಾಪ್ತಿಯಲ್ಲಿ ಇರುವ ಘನ ತ್ಯಾಜ್ಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಭೆಗೆ ತಿಳಿಸಿದರು.

   ಕೋವಿಡ್-19 ಸೋಂಕಿತ ವ್ಯಕ್ತಿ ಮನೆಗಳಲ್ಲಿನ ತ್ಯಾಜ್ಯವನ್ನು ಸಂಗ್ರಹಿಸಲು ಪ್ರತ್ಯೇಕ ವ್ಯವಸ್ಥೆ ಮಾಡಲಾಗಿರುತ್ತದೆ ಇದರಿಂದ ಪೌರಕಾರ್ಮಿಕರ ಸುರಕ್ಷತೆಯನ್ನು ಗಮನಿಸಲಾಗಿರುತ್ತದೆ.

ಕೋವಿಡ್-19ರ ಟ್ರಯಾಬ್ ಸೆಂಟರ್ ಕೋವಿಡ್ ವಾರ್ ರೂಂ, ಹಾಗೂ ಕೋವಿಡ್ ಆರೈಕೆ ಕೇಂದ್ರಗಳ ಮಾಹಿತಿಯನ್ನು ಕಸದ ವಾಹನದಲ್ಲಿ ಅರಿವು ಮೂಡಿಸಲು ಪ್ರಾರಂಭಿಸುವುದಾಗಿ ಹಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿದರು.

ವಾರ್ಡ್ ವ್ಯಾಪ್ತಿಯಲ್ಲಿನ ಪೌರಕಾರ್ಮಿಕರ ಲಸಿಕೆ ಹಾಕಿಸಿಕೊಳ್ಳಲು ವ್ಯವಸ್ಥೆ ಮಾಡಲು ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಗೆ ಕೋರಿದರು.

2. **ಕಾಮಗಾರಿ ಇಲಾಖೆ:-** ವಾರ್ಡ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ರಸ್ತೆ ಪಕ್ಕದಲ್ಲಿ ಇರುವ ಚರಂಡಿಗಳನ್ನು ಸ್ವಚ್ಛಗೊಳಿಸುವುದು ಹಾಗೂ ರಸ್ತೆ ಪಕ್ಕದಲ್ಲಿ ಬಿದ್ದಿರುವ ಮಣ್ಣನ್ನು ತೆಗೆದುಹಾಕುವ ಕಾಮಗಾರಿಯನ್ನು ನಿರ್ವಹಿಸುವಂತೆ ಸಂಬಂಧಪಟ್ಟವರಿಗೆ ಸೂಚಿಸಲಾಯಿತು. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಸಮರ್ಪಕವಾಗಿ ಮುಚ್ಚುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

**ಕಾರ್ಯದರ್ಶಿಯವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

**( ನರಸಿಂಹಮೂರ್ತಿನಾಯಕ್)**
ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು
ವಾರ್ಡ್ ನಂ 186. ಜರಗನಹಳ್ಳಿ

**( ಡಾ॥ ರವಿ )**
ನೋಡಲ್ ಅಧಿಕಾರಿ,
ವಾರ್ಡ್ ನಂ 186